(7) ಬಿಡಸವಾಲುದಾರನು ಮೇಲ್ಕಂಡ 5 ಮತ್ತು 6ನೆ ಪ್ಯಾರಾಗಳಲ್ಲಿ ಉದಹರಿತವಾಗಿರುವ ಷರತ್ತುಗಳಿಗೆ ವಿರೋಧವಾಗಿ ನಡದಲ್ಲಿ ತನ್ನ ಹಕ್ಕು ಕಳಕೊಳ್ಳುವದಲ್ಲದೆ ಅದುವರಿವಿಗೂ ಕೊಟ್ಟಿರುವ ಮೊಬಲಗು ಸರ್ಕಾರಕ್ಕೆ, ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ದುಸರಾ ಹರಾಜು ಮಾಡಿಸಿ ನಷ್ಟಕ್ಕೆ ಈ ಬಿಡಸವಾಲ್ದಾರನನ್ನು ಗುರಿಪಡಿಸುತ್ತೆ.

(8) ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 4ನೆ ಡಿಸೆಂಬರ್ 1906.

ಹಾಸನ ಡಿಸ್ಟ್ರಿಕ್ಟು ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ ಜೋಡಿ ಗೋಂದಿ ಮಲ್ಲೇನಹಳ್ಳಿ ಗ್ರಾಮವು ಕಂದಾಯದ ಬಾಕಿಗೋಸ್ಕರ 1907ನೆ ಇಸವಿ ಜನವರಿ ಮಾಹೆ 21ನೆ ತಾರೀಖು ಸೋಮವಾರ ದಿವಸ ದಿವಾ 11 ಘಂಟೆ ಲಾಗಾಯತು ಹೊಳೆನರಸೀಪುರ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪಸೀಲ್ ಬಗ್ಗೆ 1906ನೆ ಇಸವಿ ಡಿಸೆಂಬರ್ ಮಾಹೆ 13ನೆ ತಾರೀಖು ಮೈಸೂರ ಗೆಜೆಟ್ಟಿನ IIನೆ ಭಾಗದ 841ನೆ ಪುಟವನ್ನು ನೋಡತಕ್ಕದ್ದು.

ಆರ್. ಡಬ್ಲ್ಯೂ. ವೆದರಾಲ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಸೆಂಟ್ರಲ್ ಜೈಲ್.

ನೋಟಿಸ.

ತಾರೀಖು 13ನೆ ಡಿಸೆಂಬರ್ 1906.

ನೋಟಿಸ ಮೂಲಕ ತಿಳಿಯಪಡಿಸುವದೇನಂದರೆ:— 1907ನೆ ಇಸವಿ ಫೆಬ್ರವರಿ ಗುರ್ರೆ ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖು ವರಿವಿಗೂ ಜೈಲ್‌ನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳು ಮತ್ತು ಇತರ ಸಾಮಾನುಗಳನ್ನು ಹಾಜರುಮಾಡಲು ಕಂಟ್ರಾಕ್ಟ ಪಡಿಯಲು ಇಷ್ಟವುಳ್ಳವರಿಂದ ಹಾಜರ್ಮಾಡಲ್ಪಡುವ ಸೀಲುಕವರುನಲ್ಲಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ದಿವಾ 10 ಘಂಟೆವರಿವಿಗೆ ಅಂಗೀಕರಿಸುವರು.

ಕಂಟ್ರಾಕ್ಟಿನ ತಪಶೀಲ್‌ವಾರು ಮೈಸೂರ್ ಗೆಜೆಟ್ ಡಿಸೆಂಬರ್ 20ನೆ ತಾರೀಖಿನಲ್ಲಿ ಫಾಯಿಷ್ ಮಾಡಲ್ಪಟ್ಟಿರುತ್ತೆ.

ತಾರೀಖು 13ನೆ ಡಿಸೆಂಬರ್ 1906.

ಇದರಿಂದ ತಿಳಿಯಪಡಿಸುವದೇನಂದರೆ:— ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದುಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಗೆ ಸನ್ 1907ನೆ ಇಸವಿ ಫೆಬ್ರವರಿ ಗುರ್ರೆ ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ ಧಾನ್ಯ ಮಸಾಲೆ ಜಿನಸುಗಳೂ ಮತ್ತು ಇತರ ಆವಶ್ಯಕವಾದ ಪದಾರ್ಥಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಸನ್ 1907ನೆ ಇಸವಿ ಜನವರಿ ತಾರೀಖು 15ನೆ ಮಂಗಳವಾರ 10 ಘಂಟೆವರಿಗೂ ತೆಗೆದುಕೊಳ್ಳಲ್ಪಡುವವು.

ಸರಬರಾಯಿ ಆಗತಕ್ಕ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1906ನೆ ಇಸವಿ ಡಿಸೆಂಬರ್ 20ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿರುತ್ತದೆ.

ತಾರೀಖು 13ನೆ ಡಿಸೆಂಬರ್ 1906.

ಇದರಿಂದ ತಿಳಿಯಪಡಿಸುವದೇನಂದರೆ:— ಸನ್ 1907ನೆ ಇಸವಿ ಫೆಬ್ರವರಿ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜನವರಿ 31ನೆ ತಾರೀಖುವರಿಗೆ (ಆ ಎರಡು ದಿವಸಗಳೂ ಸೇರಿ) 12 ತಿಂಗಳ ತನಕ ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಸವದೆ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗೆದುಕೊಳ್ಳುವದಕ್ಕಾಗಿ ಕವರಿನಲ್ಲಿಹಾಕಿ ಮೊಹರುಮಾಡಿದ ದರಖಾಸ್ತುಗಳನ್ನು ಸನ್ 1907ನೆ ಇಸವಿ ಜನವರಿ 15ನೆ ತಾರೀಖು ಮಂಗಳವಾರ ಬೆಳಗ್ಗೆ 10 ಘಂಟೆವರಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿದೆ.

ಸರಬರಾಯಿ ಆಗಬೇಕಾದ ಸವದೆ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟ ಮಾಡಿಯಿರುತ್ತದೆ.

ಪಿ. ಎಸ್. ಅಚ್ಯುತರಾವ್,
ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್.